ಅಧ್ಯಕ್ಷರು:- ಇವುಗಳ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ನೈ. ಘೋರ್ಪಡೆ:- ಮಾನ್ಯ ಅಧ್ಯಕ್ಷರೆ, ನನ್ನದೊಂದು ಮನವಿ ಇದೆ. ನಮ್ಮ ಹೆಸರಿನಲ್ಲಿ ಬಂದು ಪ್ರಶ್ನೆ ಇದ್ದು ಅದಕ್ಕೆ ನಾವು ಉತ್ತರವನ್ನು ಕೊಡಬೇಕಾಗಿರುತ್ತದೆ. ಇವರೆ ಅದು ಬೇರೆ ಮಂತ್ರಿಗಳಿಗೆ ಸೆಕ್ರೆಟರಿಯವರ ಟೇಬಲ್‌ನಲ್ಲೇ ಟ್ರಾನ್ಸ್‌ಫರ್ ಆಗಿರುತ್ತದೆ. ನಾವು ಸದನಕ್ಕೆ ಬಂದಮೇಲೆ ಇದು ಗೊತ್ತಾಗುತ್ತದೆ. ಮಂತ್ರಿಗಳು ಉತ್ತರ ಕೊಟ್ಟಿಲ್ಲವೆಂಬ ಒಂದು ಅಭಿಪ್ರಾಯ ಬರುತ್ತದೆ ಈ ಕ್ರಮವನ್ನು ಏನಾದರೂ ಸರಿಪಡಿಸುತ್ತೀರಾ ? ಏಕೆಂದರೆ ನಾವು ಇಲ್ಲಿಗೆ ಬಂದ ಮೇಲೆ ಈ ಪ್ರಶ್ನೆಯನ್ನು ಇಂಥಾ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ ಎಂದು ನೋಟ್ಸ್ ಕೊಡುತ್ತಾರೆ. ಇದು ತಮಗೂ ಗೊತ್ತಿರುವುದಿಲ್ಲ.

ಅಧ್ಯಕ್ಷರು:- ಅದನ್ನು ನಾನು ಸರಿಪಡಿಸುತ್ತೇನೆ.

ಶಹಾಪುರ ತಾಲ್ಲೂಕಿನ ಕೆಂಭಾವಿ ಉಪಮಾರುಕಟ್ಟೆಗೆ ಭೂಸ್ವಾಧೀನ

126 (1032): ಶ್ರೀ ಶಿವಶೇಖರನ್ನಗೌಡ ಪಿರಮಾಳ್ (ಶಹಾಪುರ)

ಮಾನ್ಯ ವ್ಯವಸಾಯೋತ್ಪನ್ನ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಹಾಪುರ ತಾಲ್ಲೂಕಿನ ಸಗರ-ಗೋಗಿ, ಸುರಪುರ ತಾಲ್ಲೂಕಿನ ಕೆಂಭಾವಿ ಉಪಮಾರುಕಟ್ಟೆಗಳಿಗಾಗಿ ಸರ್ಕಾರದವರು ಭೂಸ್ವಾಧೀನಪಡಿಸಿಕೊಂಡಿರುವುದು ನಿಜವಲ್ಲವೇ ?

ಆ) ಹಾಗಿದ್ದಲ್ಲಿ, ಉಪಮಾರುಕಟ್ಟೆಗಳನ್ನು ಯಾವಾಗ ಅಭಿವೃದ್ಧಿಪಡಿಸಲಾಗುವುದು ?

ಇ) ಯಾವ್ಯಾವ ಕೆಲಸಗಳನ್ನು ತೆಗೆದುಕೊಳ್ಳಲಾಗುವುದು ?

ಈ) ಇದಕ್ಕಾಗಿ ಎಷ್ಟು ಹಣ ನಿಗಧಿಪಡಿಸಲಾಗಿದೆ ?

ಉ) ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಮದನ್ ಗೋಪಾಲ ನಾಯಕ್ (ಕೃಷಿ ಮಾರುಕಟ್ಟೆ ರಾಜ್ಯಸಚಿವರು).

ಅ) ನಿಜ

ಆ) ಸಗರ ಮತ್ತು ಗೋಗಿ ಉಪಮಾರುಕಟ್ಟೆ ಪ್ರಾಂಗಣಗಳ ಅಭಿವೃದ್ಧಿಗಾಗಿ ಸಹಾಯ ಧನ ನೀಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಕೆಂಭಾವಿ ಉಪಮಾರುಕಟ್ಟೆಯನ್ನು ಈಗಾಗಲೇ ಅಭಿವೃದ್ಧಿಪಡಿಸಲಾಗಿದೆ.

ಇ) ಗೋಗಿ ಮತ್ತು ಸಗರ ಉಪಮಾರುಕಟ್ಟೆ ಪ್ರಾಂಗಣಗಳಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲು ಉದ್ದೇಶಿಸಲಾಗಿದೆ.

<u>ಗೋಗಿ ಮತ್ತು ಸಗರ</u>

1) ಕಚೇರಿ ಕಟ್ಟಡ
2) ಕೊಳವೆ ಬಾವಿ
3) ಒಳರಸ್ತೆಗಳು
4) ತಾತ್ಕಾ ಚೀಲಿ ಮತ್ತು ಗೇಟುಗಳು

5) ಹರಾಜು ಕಟ್ಟೆ

6) ಗೋದಾಮುಗಳು

ಈ) 1992-93ನೇ ಸಾಲಿನಲ್ಲಿ ನಗರ ಮತ್ತು ಗೋಗಿ ಉಪಮಾರುಕಟ್ಟೆ ಪ್ರಾಂಗಣಗಳ ಅಭಿವೃದ್ಧಿಗೆ ಪ್ರತಿಯೊಂದಕ್ಕೂ ರೂ. 4.00 ಲಕ್ಷಗಳನ್ನು ವಿನಿಯೋಗಿಸಲು ಉದ್ದೇಶಿಸಲಾಗಿದೆ.

ಉ) ಸಹಾಯ ಧನ ಬಿಡುಗಡೆಯಾದ ನಂತರ ಕೂಡಲೇ ಪ್ರಾರಂಭಿಸಲಾಗುವುದು.

ಶ್ರೀ ಶಿವಶೇಖರಪ್ಪ ಗೌಡ ಶಿರವಾಳ:– ನಾನು ಕೇಳಿರುವ ಪ್ರಶ್ನೆಗೆ ನಗರ ಮತ್ತು ಗೋಗಿ ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲು ಉದ್ದೇಶಿಸಲಾಗಿದೆ, ಕಛೇರಿ ಕಟ್ಟಡ, ಗೋದಾಮುಗಳು ಎಂದು ಕೊಟ್ಟಿದ್ದಾರೆ. ಇದಕ್ಕಾಗಿ ಒಟ್ಟು 4 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಈಗಿನ ಅಂದಾಜಿನ ಪ್ರಕಾರ ಇಷ್ಟೊಂದು ಕೆಲಸಗಳನ್ನು ತೆಗೆದುಕೊಳ್ಳಬೇಕಾದರೆ ಈ 4ಲಕ್ಷ ರೂಪಾಯಿಗಳು ಸಾಕಾಗುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಇದಕ್ಕಿಂತ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಸಹಾಯಧನ ಬಿಡುಗಡೆಯಾದ ನಂತರ ಕೂಡಲೇ ಪ್ರಾರಂಭಿಸಲಾಗುವುದೆಂದು ಹೇಳಿದ್ದಾರೆ. ಈ ಸಹಾಯಧನ ಯಾವಾಗ ಬಿಡುಗಡೆಯಾಗುತ್ತದೆ, ಕೆಲಸ ಯಾವಾಗ ಪ್ರಾರಂಭವಾಗುತ್ತದೆಂದು ನಾನು ಕೇಳುತ್ತೇನೆ.

ಶ್ರೀ ಮದನಗೋಪಾಲ ನಾಯಕ್:– ಈಗಾಗಲೇ ನಾವು 4 ಲಕ್ಷ ರೂಪಾಯಿಗಳನ್ನು ಅಭಿವೃದ್ಧಿ ಕಾರ್ಯಗಳಿಗಾಗಿ ನೀಡಿದ್ದೇವೆ. 1993-94ರ ಸಾಲಿನಲ್ಲಿ ಈ ಕೆಲಸವನ್ನು ಪ್ರಾರಂಭಮಾಡುತ್ತೇವೆ. 4 ಲಕ್ಷ ರೂಪಾಯಿಗಳ ಯೋಜನೆ ಈಗ ಸರ್ಕಾರದ ಮುಂದಿದೆ. ಈ ವರ್ಷ ಅಂದರೆ 1993-94ರಲ್ಲಿ ಇದನ್ನು ಪ್ರಾರಂಭ ಮಾಡುತ್ತೇವೆ. ಇನ್ನೂ ಹೆಚ್ಚಿನ ಹಣವನ್ನು ಏನು ಕೇಳಿದ್ದಾರೆ. ಅದನ್ನು ಪರಿಶೀಲನೆ ಮಾಡಿ ಹೆಚ್ಚಿನ ಹಣವನ್ನು ಒದಗಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಶಿವಶೇಖರಪ್ಪ ಗೌಡ ಶಿರವಾಳ:– ಕಛೇರಿ ಕಟ್ಟಡ, ಕೊಳವೆ ಬಾವಿ, ಒಳರಸ್ತೆಗಳು, ತಂತಿ ಬೇಲಿ ಮತ್ತು ಗೇಟುಗಳು, ಹರಾಜು ಕಟ್ಟೆ, ಗೋದಾಮುಗಳು. ಇಷ್ಟೆಲ್ಲಾ ಕೆಲಸಗಳಿಗೆ ಕೇವಲ 4 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಇದು ಸಾಕಾಗುವುದಿಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ. ಇನ್ನೂ ಹೆಚ್ಚಿನ ಹಣವನ್ನು ಕೊಟ್ಟರೆ ಈ ಕೆಲಸವಾಗುತ್ತದೆ. ಆದ್ದರಿಂದ ಈ ವರ್ಷದಲ್ಲಿಯೇ ಕೆಲಸವನ್ನು ಪ್ರಾರಂಭ ಮಾಡಲಿಕ್ಕೆ ಹೆಚ್ಚಿನ ಹಣವನ್ನು ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಮದನ ಗೋಪಾಲ ನಾಯಕ್:– ಮಾನ್ಯ ಸದಸ್ಯರ ಬೇಡಿಕೆಯನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಉಸ್ತುವಾರಿ ಸರ್ಕಾರದಿಂದ ಸಹಕಾರ ಸಂಸ್ಥೆಗಳಿಗೆ ನಾಮ–ನಿರ್ದೇಶನ

127 (729): ಶ್ರೀ. ಬಸವರಾಜ ಪಾಟೀಲ ಅಟ್ಟೂರು (ಬಸವಕಲ್ಯಾಣ)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಉಸ್ತುವಾರಿ ಸರ್ಕಾರ ಅಸ್ತಿತ್ವದಲ್ಲಿದ್ದಾಗ ವಿವಿಧ ಸಹಕಾರಿ ಸಂಸ್ಥೆಗಳಿಗೆ ನಾಮನಿರ್ದೇಶನ ಮಾಡಲಾಗಿದೆಯೇ ?

ಆ) ಹಾಗಿದ್ದಲ್ಲಿ ನಾಮನಿರ್ದೇಶನ ಮಾಡಲಾದವರ ಮತ್ತು ಸಂಬಂಧಿಸಿದ ಸಹಕಾರಿ ಸಂಸ್ಥೆಗಳ ಹೆಸರುಗಳನ್ನು ತಿಳಿಸುವುದು ?